ಸಂಪುಟ: 11 ಸಂಚಿಕೆ:04 ದಿನಾಂಕ: ಡಿಸೆಂಬರ್ 28, 2015



# ಮಾಧ್ಯಮ ಮಂಗಳ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ



ಭದ್ರತಾ ಮಂಡಳಿಯಲ್ಲಿ ಸಿಗುವುದೇ ಭಾರತಕ್ಕೇ ಸ್ಥಾನ ?

ಪುಟ: 2



ಪ್ರವಾಸಿಗರನ್ನು ಕೈ ಬೀಸಿ ಕರೆಯುವ ಕೇರಳದ ಬೇಕಲ ಕೋಟೆ

ಪುಟ: 3



ಭರತನಾಟ್ಯ ಪ್ರವೀಣೆ ಪುತ್ತೂರಿನ ಕುವರಿ

ಪುಟ:4

## ‘ಬ್ಲಡ್ ಇರ್ರೇಡಿಯೇಶನ್ ತಂತ್ರಜ್ಞಾನ ಸಮಾಜಕ್ಕೆ ಉತ್ತಮ ಕೊಡುಗೆ’

**ಮಂಗಳಗಂಗೋತ್ರಿ:** ವೈದ್ಯಕೀಯ ವಿಜ್ಞಾನ ಇಂದು ಬಹಳಷ್ಟು ಅಭಿವೃದ್ಧಿ ಹೊಂದಿದ್ದರೂ ಕೆಲವೊಂದು ತಾಂತ್ರಿಕ ಅಡೆತಡೆಗಳಿಂದಾಗಿ ಹಲವಾರು ಸಮಸ್ಯೆಗಳು ಎದುರುರಾಗುತ್ತಿರುವುದು ವೈದ್ಯಕೀಯ ವಿಜ್ಞಾನ ಕ್ಷೇತ್ರಕ್ಕೆ ಸವಾಲಾಗಿದೆ. ಬ್ಲಡ್ ಇರ್ರೇಡಿಯೇಶನ್ ನಂತಹ ಕೆಲವು ತಂತ್ರಜ್ಞಾನಗಳು ಸಮಾಜಕ್ಕೆ ಉತ್ತಮ ಕೊಡುಗೆಯಾಗಿವೆ. ರಕ್ತ ಮತ್ತು ಅಂಗಾಂಗ ವರ್ಗಾವಣೆಯ ಸಂದರ್ಭದಲ್ಲಿ ಆಗಬಹುದಾದ ತಾಂತ್ರಿಕ ತೊಡಕನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲು ಮುಂಬೈಯ ಎನ್‌ಎಎಆರ್‌ಐ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ.ಎ.ಕೆ ಕೊಹ್ಲಿ ಕರೆ ನೀಡಿದರು.

ಅವರು ಮಂಗಳೂರು



*ಮುಂಬೈಯ ಎನ್‌ಎಎಆರ್‌ಐ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ.ಎ.ಕೆ ಕೊಹ್ಲಿ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಡಾ. ಸೋಮಶೇಖರಪ್ಪ, ಡಾ.ಬಿ.ನಾರಾಯಣ, ಡಾ.ಗಣೇಶ್ ಹಾಗು ಡಾ.ಪಾಟೀಲ್ ಅವರನ್ನು ಕಾಣಬಹುದು .*

ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ರೇಡಿಯೇಶನ್ ಟೆಕ್ನಾಲಜಿ (ಕಾರ್ಟ್) ರೇಡಿಯೋಯಿಸೊಟಾಪ್ಸ್ ಆಂಡ್ ಆಶ್ರಯದಲ್ಲಿ ಇತ್ತೀಚೆಗೆ ಮಂಗಳೂರು ವಿವಿಯ ಹಳೆಯಸೆನೆಟ್ ಸಭಾಂಗಣದಲ್ಲಿ ‘ಬ್ಲಡ್ ಇರ್ರೇಡಿಯೇಶನ್ ಆಂಡ್ ಇಟ್ಸ್ ಅಪ್ಲಿಕೇಶನ್ ಇನ್ ಟ್ರಾನ್ಸ್‌ಫ್ಯೂಶನ್ ಮೆಡಿಸಿನ್’ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಗ್ರಾಫ್ಟ್ ವರ್ಸಸ್ ಹೋಸ್ಟ್ ಡಿಸೀಸ್‌ಅನ್ನು ತಡೆಗಟ್ಟಲು ಬ್ಲಡ್ ಇರ್ರೇಡಿಯೇಶನ್ ಮಾಡುವುದು ಅವಶ್ಯವಾಗಿದೆ. ರಕ್ತವನ್ನು ಗಾಮ ವಿಕರಣಕ್ಕೆ ಒಳಪಡಿಸಿ ಗ್ರಾಫ್ಟ್ ವರ್ಸಸ್ ಡಿಸೀಸ್ ಅಪಾಯವನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಅವರು ಹೇಳಿದರು. ಮುಖ್ಯ ಅತಿಥಿಯಾಗಿದ್ದ ಎನ್ ಎ ಎ ಆರ್ ಆರ್ ಐ ಸಂಸ್ಥೆಯ ಕಾರ್ಯದರ್ಶಿ ಪಿ.ಜೆ ಚಾಂಡಿ ಮಾತನಾಡಿ ಈ ಮೊದಲು ರಕ್ತವಿಕಿರಣತ್ವಕ್ಕೆ ನಾವು ವಿದೇಶದ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕಿತ್ತು. ಈಗ ದೇಸಿ ತಂತ್ರಜ್ಞಾನವನ್ನು ಬಳಸಿ ಬ್ಲಡ್ ಇರ್ರೇಡಿಯೇಡರ್ ಅನ್ನು ತಯಾರಿಸಲಾಗಿದ್ದು ಇದು ಅನೇಕ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಬಳಕೆಯಾಗುತ್ತಿದೆ. ಈ ಕ್ಷೇತ್ರದಲ್ಲಿ ಇನ್ನಷ್ಟು ತಾಂತ್ರಿಕ ಪ್ರಗತಿ ಸಾಧಿಸಬೇಕಿದೆ ಎಂದರು.

ಮಂಗಳೂರು ವಿವಿಯಲ್ಲಿ ಬ್ಲಡ್ ಇರ್ರೇಡಿಯೇಟರ್ ತಂತ್ರಜ್ಞಾನವನ್ನು ಮುಂಬೈಯ ಡಾ. ಈ ಗಣೇಶ್ ಉದ್ಘಾಟಿಸಿದರು. ವಿವಿಯ ಪರೀಕ್ಷಾಂಗ ಕುಲಸಚಿವ ಪ್ರೊ.ಬಿ. ನಾರಾಯಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## “ಪ್ರವಾಸೋದ್ಯಮದಲ್ಲಿ ಆತಿಥ್ಯ ಅಗತ್ಯ”




**ಮಂಗಳಗಂಗೋತ್ರಿ:**“ಪ್ರವಾಸೋದ್ಯಮಲ್ಲಿ ಆತಿಥ್ಯ ಅತೀ ವ'ಂಂಖ್ಯವಾಗಿದ'್ಧ, ಪ್ರವಾಸಿಗರನ್ನು ಉತ್ತಮ ರೀತಿಯಲ್ಲಿ ನೋಡಿ ಕಂಡರೆ ಪ್ರವಾಸೋದ್ಯಮ ಬೆಳೆಯಲು ಸಾಧ್ಯ” ಎಂದು ಮಂಗಳೂರು ಗೇಟ್ ವೇ ಹೋಟೆಲ್ ಜನರಲ್ ಮ್ಯಾನೇಜರ್ ಪೀಟರ್ ನಿರ್ಮಲ್ ತಿಳಿಸಿದರು.

ಅವರು ಮಂಗಳೂರು ವಿವಿಯ ಪ್ರವಾಸೋದ್ಯಮ ವಿಭಾಗ ‘ಒಂದು ಬಿಲಿಯನ್ ಪ್ರವಾಸಿಗರು ಒಂದು ಬಿಲಿಯನ್ ಅವಕಾಶಗಳು’ ಎಂಬ ಥೀಮ್‌ನ ಅಡಿಯಲ್ಲಿ ಆಯೋಜಿಸಿದ್ದ ವಿಶ್ವ ಪ್ರವಾಸೋದ್ಯಮ ದಿನ ಸಂಭ್ರಮಾಚರಣೆ ಉದ್ಘಾಟಿಸಿ ಮಾತನಾಡಿದರು.

‘ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಗಾಧ ಅವಕಾಶಗಳಿದ್ದು, ಅದರಿಂದ ಉತ್ತಮ ಆದಾಯಗಳಿಸಲು ಮತ್ತು ಗೌರವ ಸಂಪಾದಿಸಲು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಾಧ್ಯವಿದೆ’ ಎಂದು ಅವರು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಎಂಬಿಎ ವಿಭಾಗದ ಪ್ರಾಧ್ಯಾಪಕರಾದ ಡಾ. ಪಕೀರಪ್ಪ, “ದಕ್ಷಿಣ ಕನ್ನಡದಲ್ಲಿ ಟೂರಿಸಂ ಕಾರಿಡಾರ್‌ಗಳನ್ನು ನಿರ್ಮಿಸುವ ಅಗತ್ಯವಿದೆ. ಇದರಿಂದ ಪ್ರವಾಸೋದ್ಯಮ ಬೆಳವಣಿಗೆಯಾಗಲು ಸಾಧ್ಯ. ಜತೆಗೆ ಪ್ರವಾಸಿಗರನ್ನು ಆಕರ್ಷಿಸುವಂತಹ ಯೋಜನೆಗಳನ್ನು ಕೈಗೊಳ್ಳಬೇಕಾದಂತ ಸ್ಥಿತಿ ಇದೆ. ಇಂದು ದೇಶದ ಒಟ್ಟು ಆದಾಯದಲ್ಲಿ ಪ್ರವಾಸೋದ್ಯಮದ ಪಾಲು ಕೇವಲ ಶೇ.3.5 ಅದನ್ನು ಶೇ.10 ಏರಿಸುವಲ್ಲಿ ನಾವು ಶ್ರಮವಹಿಸಬೇಕು ಎಂದು ಅವರು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಎಂಬಿಎ ವಿಭಾಗದ ಅಧ್ಯಕ್ಷರಾದ ಪ್ರೊ. ಮಲ್ಲಿಕಾರ್ಜುನಪ್ಪ ಮಾತನಾಡಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಂದರೆಗಳನ್ನು ನಿವಾರಿಸಿ ಕ್ಷೇತ್ರವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಮಾಡಬೇಕು. ನಾವು ಆಹಾರ ಉತ್ಪನ್ನಗಳನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಬಳಸುತ್ತೇವೆ. ಆದರೆ ಆಹಾರ ಪೋಲಾಗುವಿಕೆಯಂತಹ ಸಣ್ಣ ವಿಷಯಗಳನ್ನು ಕಡೆಗಣಿಸುತ್ತೇವೆ. ಪ್ರಸ್ತುತ ಜಗತ್ತಿನಲ್ಲಿ ಉತ್ಪಾದನೆಯಾಗುವ ಆಹಾರದಲ್ಲಿ ಶೇಕಡಾ 28ರಷ್ಟು ಆಹಾರ ಪೋಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪುಟ 4

## ವೈಜ್ಞಾನಿಕತೆ ಹಾಗು ಆಧುನಿಕತೆ ಬಹಳವಾಗಿ ಪ್ರೀತಿಸಿದವರು ಕಾರಂತರು: ಪ್ರಸನ್ನ ಹೆಗ್ಗೋಡು

**ಮಂಗಳಗಂಗೋತ್ರಿ:** ನವೋದಯದ ಮೂಲಕ ಶಿವರಾಮ ಕಾರಂತರನ್ನು ಹಾಗೂ ಠಾಕೂರರನ್ನು ನಾವಿಂದು ನೆನಪಿಸಿಕೊಳ್ಳಬೇಕು. ವೈಜ್ಞಾನಿಕತೆ ಹಾಗೂ ಆಧುನಿಕತೆ ಬಹಳವಾಗಿ ಪ್ರೀತಿಸಿದವರು ಕಾರಂತರು. ಸಭ್ಯತೆ ಮತ್ತು ಸಂಸ್ಕೃತಿಯನ್ನು ಜೊತೆಗೆ ಸೇರಿಸಿ ಉತ್ತಮ ಕೃತಿಗಳನ್ನು ಹೊರ ತಂದ ಹಿರಿಮೆ ಕಾರಂತರದ್ದು ಎಂದು ಖ್ಯಾತ ರಂಗ ನಿರ್ದೇಶಕ ಪ್ರಸನ್ನ ಹೆಗ್ಗೋಡು ಅಭಿಪ್ರಾಯಪಟ್ಟಿದ್ದಾರೆ.



*ಪ್ರಸನ್ನ ಹೆಗ್ಗೋಡು ಕಾರ್ಯಕ್ರಮ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಪ್ರೊ.ಶಿವರಾಂ ಶೆಟ್ಟಿ, ಕುಲಪತಿ ಪ್ರೊ.ಕೆ ಬೈರಪ್ಪ ಹಾಗೂ ಡಾ.ಸಿ.ಎನ್ ರಾಮಚಂದ್ರನ್‌ರನ್ನು ಕಾಣಬಹುದು.*

ಅವರು ಇತ್ತಿಚೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ, ಮಂಗಳೂರಿನ ಕರ್ನಾಟಕ ಬ್ಯಾಂಕ್ ಲಿ. ಹಾಗು ಮಂಗಳೂರು ವಿವಿ ಕೋಟ ಶಿವರಾಮ ಕಾರಂತ ಅಧ್ಯಯನ ಪೀಠದ ಸಹಯೋಗದಲ್ಲಿ ಹಳೆಯ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೋಟ ಶಿವರಾಮ ಕಾರಂತರ ಹುಟ್ಟುಹಬ್ಬ ರಾಷ್ಟೀಯ ವಿಚಾರ ಕಮ್ಮಟ ಉದ್ಘಾಟಿಸಿ ಮಾತನಾಡಿದರು.

ಪ್ರಕೃತಿ ಮತ್ತು ಸಭ್ಯತೆಯ ಅಂಚಿನಲ್ಲಿ ಬದುಕುವ ಜನರ ಕುರಿತಾದ ಕಾಳಜಿಯನ್ನು ಕಾರಂತರ ಕೃತಿಯಲ್ಲಿ ನೋಡಬಹುದು. ತಂತ್ರಜ್ಞಾನದ ಹುಟ್ಟಿನೊಂದಿಗೆ ಸಭ್ಯತೆಯೂ ಹುಟ್ಟಿಕೊಂಡಿತು. ಸಭ್ಯತೆಯ ಉಗಮದೊಂದಿಗೆ ಧಂದ್ವವೂ ಸೃಷ್ಟಿಯಾಯಿತು. ಪ್ರಕೃತಿ ಮತ್ತು ಸಭ್ಯತೆಯ ಗಡಿದಾಟಿ ಬಂದರೆ ಸಭ್ಯತೆಯ ಅತಿರೇಕವಾಗುತ್ತದೆ ಎಂದರು.

ಇಂದು ಶ್ರೀಮಂತ ಬದುಕನ್ನು ತೊರೆದು ಸರಳ ಜೀವನಕ್ಕೆ ಹೊರಳಬೇಕಾದ ಅವಶ್ಯಕತೆ ಇದೆ. ಯಂತ್ರ ನಾಗರಿಕತೆಯನ್ನು ಕಳಚುವ ಚಳವಳಿ ನಡೆಯಬೇಕಿದೆ. ಸಾಮಾಜಿಕ ವಿಷಮತೆ ಕಳಚಿ ವಿಜ್ಞಾನ ಉಳಿಸುವ ಕಾರ್ಯ ಆಗಬೇಕೆಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಶಯ ಭಾಷಣ ಮಾಡಿದ ಪ್ರೊ.ಸಿ,ಎನ್ ರಾಮಚಂದ್ರನ್ ಮಾತನಾಡಿ ಯಾವುದೇ ಸಾಂಸ್ಕೃತಿಕ ಸಮುದಾಯ ಅನ್ಯ ಸಂಸ್ಕೃತಿಯನ್ನು ಇಡಿಯಾಗಿ ಸ್ವೀಕರಿಸುವುದಿಲ್ಲ. ಅದನ್ನು ಪರಿಷ್ಕರಿಸಿ ತನ್ನ ಸಂಸ್ಕೃತಿಗೆ ಅನ್ವಯವಾಗುವಂತೆ ಸೇರಿಸಿಕೊಳ್ಳುತ್ತದೆ. ಎಲ್ಲಾ ಮೌಲ್ಯ, ಧರ್ಮಗಳು ಸಂಸ್ಕೃತಿಯನ್ನು ಹೊಂದಿವೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿವಿ ಕುಲಪತಿ ಪ್ರೊ.ಕೆ ಬೈರಪ್ಪ ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಆಂತರಿಕ ಶಿಸ್ತಿನ ಅಗತ್ಯವಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ವಿಮರ್ಶೆಗಳನ್ನು ವಿದ್ಯಾರ್ಥಿಗಳು ತೊಡಗಿಕೊಳ್ಳುವಂತೆ ಮಾಡಬೇಕು. ಹಲವಾರು ಪರಿಣಿತರನ್ನು ಕರೆದು ವಿಶ್ವವಿದ್ಯಾನಿಲಯದ ವಿಧ್ಯಾರ್ಥಿಗಳಿಗೆ ಉತ್ತಮ ಜ್ಞಾನಾರ್ಜನೆಯನ್ನು ನೀಡುವ ಉದ್ದೇಶ ವಿವಿ ಹೊಂದಿದೆ. ಅದಕ್ಕಾಗಿಯೇ ಐದು ಲಕ್ಷವನ್ನು ಮೀಸಲಿಡಲು ವಿವಿ ನಿರ್ಧರಿಸಿದೆ ಎಂದು ತಿಳಿಸಿದರು.

ಸಂಪಾದಕೀಯ:

## ಸೌಹಾರ್ದ ಕೆಡಿಸದಿರಲಿ ಗೋಮಾಂಸ ಭಕ್ಷಣೆ

*ಗೋಮಾಂಸ ಭಕ್ಷಣೆಯ ಪರ-ವಿರೋಧ ವಾದ, ಗಲಭೆಗಳು ದಿನೇ ದಿನೇ ದೇಶದ ವಿವಿಧ ಕಡೆಗಳಲ್ಲಿ ನಡೆಯುತ್ತಿರುವುದು ಕಳವಳಕಾರಿಯಾಗಿದೆ. ಗೋಮಾಂಸ ಭಕ್ಷಿಸಿದ ವದಂತಿಯ ಹಿನ್ನೆಲೆಯಲ್ಲಿ ಉತ್ತರಪ್ರದೇಶದ ದಾದ್ರಿಯಲ್ಲಿ ಮೊಹಮ್ಮದ್ ಇಖ್ಲಾಕ್ ಎಂಬಾತನನ್ನು ಉದ್ರಿಕ್ತ ಜನರ ಗುಂಪು ಬಡಿದು ಕೊಂದದ್ದು ಈ ಗಲಭೆಗೆ ನಾಂದಿ. ಆ ಬಳಿಕ ಅಲ್ಲಲ್ಲಿ ಇಂತಹ ಘಟನೆಗಳು ನಡೆದು ಸೌಹಾರ್ದವನ್ನು ಕೆಡಿಸುತ್ತಿದೆ.*



*ಕಾನೂನನ್ನು ಕೈಗೆತ್ತಿಕೊಳ್ಳುತ್ತಿರುವ ಗೋಮಾಂಸ ಭಕ್ಷಣೆಯ ವಿರೋಧಿಗಳು ಮತ್ತು ಸಮರ್ಥಕ ಇತ್ತಂಡಗಳೂ ಸಂಯಮ ವಹಿಸಿಕೊಳ್ಳಬೇಕಾಗಿದೆ. ಪ್ರಧಾನಿ ಮೋದಿ ಹೇಳಿರುವುದು ನಿಜ. ನಮ್ಮ ಲಕ್ಷ್ಯ ಇರಬೇಕಾದುದು ಶಾಂತಿಯನ್ನು ಕದಡುವ ಇಂತಹ ಬಡಿದಾಟ ನಡೆಸುವುದರ ಮೇಲಲ್ಲ ಬದಲಿಗೆ, ನಾವು ಎದುರಿಸುವ ಜ್ವಲಂತ ಸಮಸ್ಯೆಗಳನ್ನು ಎದುರಿಸಿ ಪರಿಹಾರ ಕಂಡುಕೊಳ್ಳುವುದರತ್ತ.*

*ದೇಶದಲ್ಲಿ ಗೋಮಾಂಸ ತಿನ್ನುವ ವಿಚಾರದ ಪರ ವಿರೋಧ ಘರ್ಷನೆಯ ಇತಿಹಾಸ ಇಂದು ನಿನ್ನೆಯದಲ್ಲ, ಭಾರತದ ಮೊದಲ ಸ್ವಾತಂತ್ರ್ಯಸಂಗ್ರಾಮ ಎಂಬ ಖ್ಯಾತಿಯ ಸಿಪಾಯಿ ದಂಗೆ ಆರಂಭವಾದುದೇ ಈ ಕಾರಣದಿಂದ ಆಗ ಬ್ರಿಟೀಷರು ಹಿಂದೂ ಸಿಪಾಯಿಗಳು ಬಳಸುವ ಬಂದೂಕುಗಳಿಗೆ ಗೋವಿನ ಕೊಬ್ಬು, ಮುಸ್ಲಿಮ್ ಸಿಪಾಯಿಗಳಿಗೆ ನೀಡುವ ಗುಂಡುಗಳಿಗೆ ಹಂದಿಯ ಕೊಬ್ಬು ಸವರಿ ಒಡಕು ಹುಟ್ಟಿಸುವ ಕೆಲಸ ಮಾಡಿದರು. ಈಗಲೂ ನಡೆಯುತ್ತಿರುವ ಗೋಮಾಂಸ ಸಂಬಂಧೀ ಗಲಭೆಗಳಲ್ಲಿ ಕೇವಲ ಆಹಾರ ವಿಚಾರಕ್ಕಿಂತ ರಾಜಕೀಯ ಬೇಳೆ ಬೇಯಿಸಿಕೊಳ್ಳುವ, ಕೋಮು ಧ್ರುವೀಕರಣ ಸಾಧಿಸುವ ಉದ್ದೇಶ ಹೆಚ್ಚು ಕೆಲಸ ಮಾಡುತ್ತಿದೆ ಎನ್ನುವುದು ಸುಳ್ಳಲ್ಲ.*

*ಗೋಮಾಂಸ ಭಕ್ಷಣೆಯನ್ನು ಸಮರ್ಥಿಸಿ ಶ್ರೀನಗರದ ಶಾಸಕರ ಭವನದಲ್ಲಿ ಪಕ್ಷೇತರ ಶಾಸಕ ಶೇಖ್ ಅಬ್ದುಲ್ ರಶೀದ್ ಗೋಮಾಂಸ ಖಾದ್ಯ ಪಾರ್ಟಿ ನಡೆಸಿದ್ದರು. ಅದನ್ನು ಅವರು ವಿಧಾನಸಭೆಯಲ್ಲಿ ಹೇಳಿಕೊಂಡದ್ದು ಅಲ್ಲಿನ ಬಿಜೆಪಿ ಶಾಸಕರನ್ನು ಕೆರಳಿಸಿದೆ, ರಶೀದ್ ಅವರನ್ನು ಥಳಿಸುವಂತೆ ಮಾಡಿದೆ. ಶಾಸಕರ ಭವನದಲ್ಲಿ ಗೋಮಾಂಸ ಪಾರ್ಟಿ ನಡೆಸಿದ್ದು ಮತ್ತು ವಿಧಾನಸಭೆಯಲ್ಲೇ ರಶೀದ್ ಅವರನ್ನು ಥಳಿಸಿದ್ದು ಒಂದಕ್ಕಿಂತ ಇನ್ನೊಂದು ಕಡಿಮೆ ಇಲ್ಲದ ಕೀಳು ನಡವಳಿಕೆಯಾಗಿದೆ.*

*ಇತ್ತ ಕೇರಳದಲ್ಲಿ, ಗೋಮಾಂಸ ಭಕ್ಷಣೆಯನ್ನು ಸಮರ್ಥಿಸಲಿಲ್ಲ ಎಂಬ ಕಾರಣಕ್ಕೆ ಲೇಖಕರೊಬ್ಬರನ್ನು ಥಳಿಸಲಾಗಿದೆ. ದಾದ್ರಿಯಲ್ಲಿ ಇಖ್ಲಾಕ್ ಹತ್ಯೆ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ರಾಜಕೀಯ ನಾಯಕರು ಯಾವುದೇ ಭೇದವಿಲ್ಲದೆ ಅತ್ಯುಚ್ಚಮಟ್ಟದ ಬೇಜವಾಬ್ದಾರಿಯುತ ಕೋಮುಭಾವನೆ ಕೆರಳಿಸುವ ಹೇಳಿಕೆಗಳನ್ನು ನಿರಂತರವಾಗಿ ನೀಡುತ್ತಾ ಬೆಂಕಿಗೆ ತುಪ್ಪ ಹೊಯ್ಯುವ ಕೆಲಸ ಖಂಡನೀಯ.*

*ಗೋಮಾಂಸ ಭಕ್ಷಣೆಯ ವಿಚಾರದಲ್ಲಿ ಬೀದಿಯಲ್ಲಿ ನಿಂತು ಪರ-ವಿರೋಧ ವಾದಿಸುವುದು,ಹೊಡೆದಾಟ ಅಸಮರ್ಥನೀಯ. ಗೋಮಾಂಸ ಭಕ್ಷಿಸಲೇಬಾರದು ಎಂದು ಕಾನೂನನ್ನು ಕೈಗೆತ್ತಿಕೊಳ್ಳುವುದು, ಗೋಮಾಂಸ ಭಕ್ಷಿಸಿದ ಕಾರಣಕ್ಕೆ ಹೊಡೆದು ಕೊಲ್ಲುವುದು ಅಕ್ಷಮ್ಯ. ಹಾಗುಎಗ್ಗುಸಿಗ್ಗಿಲ್ಲದೆ ಕಾನೂನನ್ನು ಧಿಕ್ಕರಿಸಿ ಗೋವುಗಳ ಕಳ್ಳಸಾಗಣೆ ಮತ್ತು ಅಕ್ರಮ ಕಸಾಯಿ ವಿರುದ್ಧ ದಿಟ್ಟ ಕ್ರಮ ಅಗತ್ಯ.*

*ಗೋಮಾಂಸ ಭಕ್ಷಣೆಯ ಕ್ಷುಲ್ಲಕ ಕಾರಣ ಹಿಡಿದುಕೊಂಡು ದೇಶ ಉದ್ವಿಘ್ನಗೊಳ್ಳುವುದು, ಮತೀಯ ನೆಲೆಯಲ್ಲಿ ಯುದ್ಧದ ನೆಲೆಯಾಗುವುದು ಬೇಡ. ದೇಶದ ಸೌಹಾರ್ದ ಜೀವನ ಈ ಕಾರಣದಿಂದಾಗಿ ಕದಡದಿರಲಿ. ಬಾಹ್ಯ ಪ್ರಚೋದನೆಗೆ ಒಳಗಾಗದೆ ಜನಸಾಮಾನ್ಯರು ಸಂಯಮದಿಂದ ಇದ್ದರೆ ಮಾತ್ರ ಇದು ಸಾಧ್ಯ.*

## ಸಂಪಾದಕರಿಗೆ ಪತ್ರ

### ಮಂಗಳೂರು ವಿವಿಯ ಉದ್ಯಾನ-ಮನಸ್ಸಿಗೆ ಉಲ್ಲಾಸ

ಮಂಗಳೂರು ವಿವಿಯ ಕ್ಯಾಂಪಸ್‌ನಲ್ಲಿ ಹಸಿರು ಹುಲ್ಲುಹಾಸನ್ನು ಹಾಸಿದ್ದು ಮನಸ್ಸಿಗೆ ಮುದ ನೀಡುವಂತಿದೆ. ಅದು ಮಾಜಿ ಕುಲಪತಿ ಪ್ರೊ.ಶೇಖ್ ಅಲಿ ರಸ್ತೆ ಹಾಗೂ ಮಂಗಳಾ ಕ್ಯಾಂಟೀನ್ ಎದುರಿನಲ್ಲಿದ್ದು ಮೂಡಿ ಬಂದಿದೆ. ದಿನಾ ಪೂರ್ತಿ ಪಾಠ ಕೇಳಿ ಸುಸ್ತಾದ ಮನಗಳಿಗೆ ಬಿಡುವಿನ ವೇಳೆಯನ್ನು ಕಳೆಯಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ. ಇದರಿಂದ ಕ್ಯಾಂಪಸ್ ಸೌಂದರ್ಯ ಹೆಚ್ಚಿದ್ದು, ವಿದ್ಯಾರ್ಥಿಗಳು ಇಲ್ಲಿ ಹರಟೆ ಹೊಡೆಯುತ್ತಾ, ಸೆಲ್ಫಿ ಕ್ಲಿಕ್ಕಿಸುತ್ತಾ, ತಿಂಡಿ ತಿನಸುಗಳನ್ನು ಹಂಚುತ್ತಾ ಗೆಳೆಯರೊಡನೆ ಖುಷಿಪಡುವುದನ್ನು ಕಾಣಬಹುದು.

ಇಷ್ಟೇ ಅಲ್ಲದೆ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ಕಲಿಯುವುದನ್ನು ನೋಡಬಹುದು. ಉದ್ಯಾನದ ನಿರ್ಮಾಣಕ್ಕೆ ಮೊದಲು ಜನ ಇಲ್ಲದೆ ಬಿಕೋ ಎನ್ನುತ್ತಿದ್ದ ಈ ಸ್ಥಳ ಇಂದು ವಿದ್ಯಾರ್ಥಿಗಳಿಂದ ಜಿನುಗುಡುತ್ತಿದೆ.

ಇದನ್ನು ಒಳ್ಳೆಯ ರೀತಿಯಲ್ಲಿ ಸಂರಕ್ಷಿಸಿರುವುದು ವಿವಿಯ ಪರಿಸರ ಪ್ರೇಮಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಂತಹ ಉದ್ಯಾನಗಳನ್ನು ಎಲ್ಲಾ ವಿಭಾಗಗಳ ಮುಂದೆ ನಿರ್ಮಿಸಿದರೆ ವಿವಿಯು ಇನ್ನೂ ಸುಂದರವಾಗಿ ಕಂಗೊಳಿಸುವುದರಲ್ಲಿ ಎರಡು ಮಾತಿಲ್ಲ.

**ಕೌಶಿಕ್**

## ಭದ್ರತಾ ಮಂಡಳಿಯಲ್ಲಿ ಸಿಗುವುದೇ ಭಾರತಕ್ಕೇ ಸ್ಥಾನ ?

ವಿಶ್ವಸಂಸ್ಥೆ ಭದ್ರತಾ ಮಂಡಳಿ ಪುನರ್ ರಚನೆ ಕುರಿತ ಪ್ರಸ್ತಾವನೆಗೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಸಮ್ಮತಿ ನೀಡಿವೆ. ಈ ಹಿನ್ನೆಲೆಯಲ್ಲಿ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆಯಬೇಕೆನ್ನುವ ಭಾರತದ ಆಸೆ ಮತ್ತೆ ಚಿಗುರೊಡೆದಿದೆ. **ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆಯಬೇಕೆನ್ನುವ ಭಾರತದ ಹೋರಾಟ ಇಂದು ನಿನ್ನೆಯದಲ್ಲ. ಅದಕ್ಕೆ ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತಲೇ ಇದೆ. ಆದರೆ ಇದುವರೆಗೆ ಅದು ಕನಸಾಗಿಯೇ ಉಳಿದಿದೆ. ಸದ್ಯ ಪುನರ್ ರಚನೆ ಪ್ರಸ್ತಾವ ಕುರಿತ ಕರಡು ಪ್ರಕ್ರಿಯೆಗಳು ಸ್ವೀಕೃತಗೊಂಡು ಚರ್ಚೆಯಾಗಲಿದೆ.** ಬಳಿಕವಷ್ಟೇ ಈ ಕುರಿತ ಪ್ರಕ್ರಿಯೆಗಳು ಆರಂಭಗೊಳ್ಳಲಿದೆ.

ಭದ್ರತಾ ಮಂಡಳಿ ವಿಶ್ವಸಂಸ್ಥೆಯ ಪ್ರಮುಖ ಅಂಗಗಳಲ್ಲಿ ಒಂದು. ಇದರ ಸಾಮಾನ್ಯ ಜವಾಬ್ದಾರಿ ಎಂದರೆ ಅಂತಾರಾಷ್ಟ್ರೀಯ ಶಾಂತಿಯನ್ನು ಕಾಪಾಡಿಕೊಂಡು ಬರುವುದು ಮತ್ತು ಭದ್ರತೆಯ ಮೇಲ್ವಿಚಾರಣೆಯ ಹೊಣೆಯನ್ನು ವಹಿಸಿಕೊಳ್ಳುವುದು. ಇಂದು ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ನಡುವೆ ಶಾಂತಿ, ಯುದ್ಧೋನ್ಮಾದದ ವಿರುದ್ಧ ನಿರ್ಬಂಧಗಳು, ಶಾಂತಿಪಾಲನಾ ಪಡೆಯನ್ನು ಕಳುಹಿಸುವುದು, ಕಾರ್ಯಾಚರಣೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

**ಸದಸ್ಯರಾಷ್ಟ್ರಗಳು**

ಚೀನಾ, ಫ್ರಾನ್ಸ್, ರಷ್ಯಾ, ಅಮೆರಿಕ ಮತ್ತು ಬ್ರಿಟನ್ ಐದು ಖಾಯಂ ಸದಸ್ಯ ರಾಷ್ಟ್ರಗಳು, ಇವನ್ನು 'ಪಿ5' ಎಂದೂ ಕರೆಯಲಾಗುತ್ತಿದೆ.

ಇಂದು ವಿಶ್ವದಲ್ಲಿ 190ಕ್ಕೂ ಹೆಚ್ಚು ರಾಷ್ಟ್ರಗಳಿವೆ. ಆದರೆ ಭದ್ರತಾ ಮಂಡಳಿಯಲ್ಲಿ ಕೇವಲ ಐದು ರಾಷ್ಟ್ರಗಳು ಮಾತ್ರ ಖಾಯಂ ಸ್ಥಾನ ಹೊಂದಿದೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಹಿನ್ನೆಲೆಯಲ್ಲಿ ಇದು ಎಲ್ಲರನ್ನೂ ಪ್ರತಿನಿಧಿಸುವುದಿಲ್ಲ ಎಂಬ ಅಭಿಪ್ರಾಯವಿದೆ. ಇದಕ್ಕಾಗಿ ಭದ್ರತಾ ಮಂಡಳಿಯ ಖಾಯಂ ಸ್ಥಾನಗಳನ್ನು ಪರಿಷ್ಕರಿಸಬೇಕೆಂಬ ಬೇಡಿಕೆ ಕೇಳಿಬಂದಿದೆ. ಈ ಬಗ್ಗೆ ಪ್ರಬಲವಾಗಿ ದನಿ ಮೊಳಗಿಸಿದ್ದು ಭಾರತ, ಜರ್ಮನಿ,



ಜಪಾನ್ ಮತ್ತು ಬ್ರೆಜಿಲ್ ದೇಶಗಳು. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಯಾಗಿದ್ದ ಕೋಫಿ ಅನ್ನಾನ್ ಅವರು ತಜ್ಞರ ಸಮಿತಿಯೊಂದರ ಬಳಿ 2004 ರಲ್ಲಿ ಪುನರ್ ರಚನೆಯ ಬಗ್ಗೆ ವರದಿ ನೀಡುವಂತೆ ಕೇಳಿಕೊಂಡಿದ್ದರು. **ಆಗಿನ ಪ್ರಸ್ತಾವನೆಯಂತೆ ಭಾರತ, ಜರ್ಮನಿ, ಜಪಾನ್, ಬ್ರೆಜಿಲ್‌ಗೆ ಸ್ಥಾನ, ಆಫ್ರಿಕಾ ದೇಶಗಳಲ್ಲೊಂದಕ್ಕೆ ಸ್ಥಾನ ಮತ್ತು ಅರಬ್ ದೇಶಗಳಿಂದ ಒಂದು ದೇಶಕ್ಕೆ ಸ್ಥಾನ ಕೊಡಬೇಕೆಂದಿತ್ತು.** ಆದರೆ ಅದು ಮುಂದುವರಿಯಲಿಲ್ಲ. ಪುನರ್ ರಚನೆ ಕುರಿತಂತೆ ಕರಡು ರಚಿಸಿ ಅದನ್ನು ಪಾಸು ಮಾಡುವುದು ಮೊದಲು ಅಗತ್ಯವಾಗಿದೆ. ಇದಕ್ಕಾಗಿ ವಿಶ್ವಸಂಸ್ಥೆಯ ಮೂರನೇ ಎರಡರಷ್ಟು ಮತ ಬೇಕು. ಸದ್ಯ ಪ್ರಸ್ತಾವನೆಗೆ ಸಮ್ಮತಿ ಸಿಕ್ಕಿದ್ದು, 128 ದೇಶಗಳು ಅಸ್ತು ಅಂದಿವೆ.

**ವಿಟೋ ಅಧಿಕಾರ**

ಇದು ಖಾಯಂ ಸದಸ್ಯರಿಗಿರುವ ಒಂದು ಪರಮಾಧಿಕಾರ. ಭದ್ರತಾ ಮಂಡಳಿಯಲ್ಲಿ 'ಪ್ರಾಧಾನ್ಯತೆ' ಇಲ್ಲದ ಉದ್ದೇಶರಹಿತವಾದ ಮಸೂದೆಗಳ ವಿರುದ್ಧ ಇದನ್ನು ಪ್ರಯೋಗಿಸಬಹುದು. ಇದನ್ನು ಪ್ರಯೋಗಿಸುವುದರ ಹಿಂದೆ ಅಂತಾರಾಷ್ಟ್ರೀಯ ಶಾಂತಿಯ ಹಿತಾಸಕ್ತಿ, ಸೌಹಾರ್ದತೆ ಸ್ಥಾಪನೆಯ ಉದ್ದೇಶವಿರಬೇಕು.

**ಭಾರತ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆಯಲು ಎಷ್ಟು ಯತ್ನಿಸುತ್ತಿದೆಯೋ ಹಾಗೆಯೇ ಚೀನಾ, ಪಾಕಿಸ್ಥಾನ ದೇಶಗಳು ಈ ಸ್ಥಾನ ಭಾರತಕ್ಕೆ ಸಿಗಬಾರದು ಎಂದು ಯತ್ನಿಸುತ್ತಿವೆ.** ಇದೇ ವೇಳೆ ಭದ್ರತಾ ಮಂಡಳಿಯಲ್ಲಿ ಸ್ಥಾನ ಸಿಕ್ಕರೆ ಆ ದೇಶ ಮಹತ್ವದ ತೀರ್ಮಾನ ಕೈಗೊಳ್ಳುವ ದೇಶಗಳಲ್ಲೊಂದಾಗುತ್ತದೆ. ಇದಕ್ಕೆ ಹಿಂದಿನಿಂದಲೂ ಎಲ್ಲಾ ಖಾಯಂ ಸದಸ್ಯ ರಾಷ್ಟ್ರಗಳು ತಿರಸ್ಕಾರ ಹೊಂದಿದೆ. ಹಿಂದೆ ಚೀನಾಕ್ಕೆ ಸದಸ್ಯತ್ವ ಸಿಕ್ಕಲು ಭಾರತವೇ ಬೆಂಬಲ ನೀಡಿದ್ದರೂ ಭಾರತಕ್ಕೆ ಸದಸ್ಯತ್ವ ಸಿಕ್ಕರೆ ತನ್ನ ನಿರ್ಧಾರಗಳಿಗೆ ತೊಡಕಾಗಬಹುದು ಎಂಬ ಚಿಂತೆ ಆ ದೇಶಕ್ಕಿದೆ. ರಷ್ಯಾ ಕೂಡ ವಿರುದ್ಧ ದನಿ ಎತ್ತದಿದ್ದರೂ ಬೆಂಬಲದ ಮಾತು ಆಡಿಲ್ಲ. ಪಾಕಿಸ್ತಾನವಂತೂ ಇದನ್ನು ವಿರೋಧಿಸುತ್ತಿದೆ. ಆದರೆ ಅಮೆರಿಕ ಭಾರತದ ಸದಸ್ಯತ್ವಕ್ಕೆ ಒಪ್ಪಿಗೆ ನೀಡಿದ್ದು ಭಾರತಕ್ಕೆ ಬಲ ಬಂದಂತಾಗಿದೆ.

**ಸಂತೋಷ್ ವರ್ಕಾಡಿ**

## ಸ್ವ-ಉದ್ಯೋಗಿಗಳಿಗೆ ಆಶಾಕಿರಣ: ಮುದ್ರಾಯೋಜನೆ

ಕೇಂದ್ರ ಸರಕಾರದ ಹಲವು ಜನಪರ ಯೋಜನೆಗಳಲ್ಲಿ ಮುದ್ರಾ ಯೋಜನೆಯು ಒಂದು. ಸ್ವಯಂ ಉದ್ಯೋಗಿಗಳಾಗ ಬಯಸುವವರಿಗೆ ಈ ಯೋಜನೆಯು ತುಂಬಾ ಸಹಕಾರಿಯಾಗಿದೆ. ಈ ಯೋಜನೆಯ ಮೂಲಕ ಸರಕಾರ ಜನರನ್ನು ಸ್ವ ಉದ್ಯೋಗ ಮಾಡುವ ಮೂಲಕ ಜನರು ಸ್ವಾವಲಂಬಿಗಳಾಗಲು ಸದುದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಿದೆ.

**ಏನಿದು ಮುದ್ರಾ ಯೋಜನೆ?**

ಈ ಯೋಜನೆಯ ಫಲಾನುಭವಿಗಳು ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹೊರತುಪಡಿಸಿ ಉಳಿದ ಆರ್ಥಿಕ ಚಟುವಟಿಕೆಗಳಿಗೆ ಅಥವಾ ಕಿರು ಉದ್ಯಮಗಳಿಗೆ ಸಾಲ ನೀಡಲಾಗುತ್ತದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರ "ಮುದ್ರಾ" ಬ್ಯಾಂಕ್ ಸ್ಥಾಪಿಸಿ ದೇಶದ ಪ್ರತಿಯೊಂದು ವಾಣಿಜ್ಯ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್ ಗಳ ಮೂಲಕ ಸಣ್ಣ ಉದ್ದಿಮೆದಾರರಿಗೆ ಸಾಲವನ್ನು ನೀಡುತ್ತದೆ. ಈ ಯೋಜನೆಯನ್ನು ಸಾಲ ನೀಡುವ ಮೊತ್ತದ ಆಧಾರದ ಮೇಲೆ ಮೂರು ವಿಧಗಳಾಗಿ ವಿಂಗಡಿಸಿದ್ದಾರೆ. ಶಿಶು ಸಾಲ (50000 ರೂ ವರೆಗಿನಸಾಲ) ಕಿಶೋರ ಸಾಲ (50000 ರೂ ಮೇಲ್ಪಟ್ಟು 5 ಲಕ್ಷದ ವರೆಗೆ) ತರುಣ್ ಸಾಲ (5ಲಕ್ಷದಿಂದ 10 ಲಕ್ಷದ ವರೆಗಿನ ಸಾಲ).

**ಫಲಾನುಭವಿಗಳ ಅರ್ಹತೆ**

ಪ್ರಧಾನಮಂತ್ರಿ ಮುದ್ರಾಯೋಜನೆಯಡಿ ಉತ್ಪಾದನೆ, ವ್ಯಾಪಾರ,ಸೇವಾ ವಲಯ,ಕೃಷಿಯೇತರ ವಾಣಿಜ್ಯ ಚಟುವಟಿಕೆ ಕೈಗೊಳ್ಳುವವರಿಗೆ ಕನಿಷ್ಠ 50 ಸಾವಿರದಿಂದ 10 ಲಕ್ಷದವರೆಗೆ ಸಾಲ ನೀಡಲಾಗುತ್ತದೆ. ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ರಾಜ್ಯ ಸಹಕಾರಿ ಬ್ಯಾಂಕ್‌ಗಳು, ನಗರ ಸಹಕಾರಿ ಬ್ಯಾಂಕ್‌ಗಳು ಮುದ್ರಾದ ಅಡಿಯಲ್ಲಿ ಬರುತ್ತದೆ.

**ಸಾಲ ನೀಡುವ ಪ್ರಕ್ರಿಯೆ**

ಮೊದಲಿಗೆ ಸಾಲ ಶಿಶು ಸಾಲವೇ ಕಿಶೋರ ಸಾಲವೇ ಅಥವಾ ತರುಣ್ ಸಾಲವೇ ಎಂದು ನೋಡಲಾಗುತ್ತದೆ. ಅಂದರೆ ಫಲಾನುಭವಿಗಳಿಗೆ ಎಷ್ಟು ಸಾಲ ಬೇಕು ಅವನು ಮಾಡಹೊರಟಿರುವ ಉದ್ಯೋಗವೇನು ಅದಕ್ಕನುಗುಣವಾಗಿ ಸಾಲ ನೀಡುವ ಪ್ರಕ್ರಿಯೆ ಆರಂಭವಾಗುತ್ತದೆ. ಫಲಾನುಭವಿಯು ತನ್ನ ಹತ್ತಿರದ ಬ್ಯಾಂಕನ್ನು ಸಂಪರ್ಕಿಸಿ ಅಲ್ಲಿಂದ ಮುದ್ರಾ ಸಾಲ ಯೋಜನೆಯ ಅಡಿಯಲ್ಲಿ ಸಾಲ ಪಡೆಯತಕ್ಕದ್ದು.

**ಸಾಲ ಪಡೆಯಲು ಬೇಕಾದ ಪುರಾವೆಗಳು**

1ಅರ್ಜಿದಾರರು ಸರಕಾರ ನೀಡಿದ ಯಾವುದಾದರೊಂದು ಗುರುತಿನ ಚೀಟಿ ನೀಡಬಹುದು2.ಅರ್ಜಿದಾರನ ಇತ್ತೀಚಿನ ಭಾವಚಿತ್ರ, 3.ವಾಸಸ್ಥಳ ಪುರಾವೆಗಾಗಿ, ಇತ್ತೀಚಿನ ಟೆಲಿಫೋನ್ ಬಿಲ್ ಅಥವಾ ವಿದ್ಯುತ್ ಬಿಲ್, ಕಂದಾಯ ರಶೀದಿ. 4.ಸರಬರಾಜುದಾರರ ಹೆಸರು ಮತ್ತು ವಿವರ.5.ಕೊಂಡುಕೊಳ್ಳುವ ಯಂತ್ರೋಪಕರಣಗಳು ಅಥವಾ ವಸ್ತುವಿನ ಕೊಟೇಷನ್. 6.ವ್ಯಾಪಾರ ಉದ್ಯಮದ ವಿಳಾಸ. 7.ವರ್ಗ ಅಥವಾ ಕೆಟಗರಿ ಪುರಾವೆ.

ಮುದ್ರಾ ಯೋಜನೆಯಡಿಯಲ್ಲಿ ಸಾಲ ಮಂಜೂರಾದ ನಂತರ ಅಭ್ಯರ್ಥಿ ಮುದ್ರಾ ಕಾರ್ಡ್ ಅನ್ನು ಪಡೆಯುತ್ತಾರೆ. ಈ ಕಾರ್ಡ್ ಕ್ರೆಡಿಟ್‌ಕಾರ್ಡ್ ರೀತಿಯದ್ದಾಗಿದೆ. ಈ ಕಾರ್ಡ್ ಮೂಲಕ ಅಭ್ಯರ್ಥಿ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಚ್ಚಾ ಸಾಮಾಗ್ರಿಗಳನ್ನು ಪಡೆಯಬಹುದು. ಇದರ ಮಿತಿ ಶೇಕಡಾ 10ರಷ್ಟು ಮಾತ್ರ ಅಂದರೆ ಹೆಚ್ಚೆಂದರೆ ಹತ್ತು ಸಾವಿರ ಮಾತ್ರ. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: www.mudra.org.in

**ಸಂತೋಷ್ ವರ್ಕಾಡಿ**

# ಪ್ರವಾಸಿಗರನ್ನು ಕೈ ಬೀಸಿ ಕರೆಯುವ ಕೇರಳದ ಬೇಕಲಕೋಟೆ

ತೆಂಗಿನ ಮರಗಳಿಂದ ಆವೃತ್ತವಾಗಿ ಕಂಗೊಳಿಸುತ್ತಿರುವ ಕಡಲತೀರದ ರಾಜ್ಯ ಕೇರಳ. 'ದೇವರ ಸ್ವಂತನಾಡು' ಎಂದು ಕರೆಯಲ್ಪಡುವ ಕೇರಳ ರಾಜ್ಯದಲ್ಲಿ 'ಸಪ್ತಭಾಷಾ ಸಂಗಮಭೂಮಿ' ಎಂದು ಕರೆಯಲ್ಪಡುವ ಹಾಗು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿರುವ ಜಿಲ್ಲೆ ಕಾಸರಗೋಡು. ಕಾಸರಗೋಡಿನಲ್ಲಿ ಬೇಕಲಕೋಟೆ, ಪಲ್ಲಿಕೆರೆ ಬೀಚ್, ಬೇಕಲ ಹೊಳೆ, ಅಕ್ವಾ ಪಾರ್ಕ್, ಕಾಪಿಲ್ ಬೀಚ್, ಚಂದ್ರಗಿರಿ ಕೋಟೆ, ಚಂದ್ರಗಿರಿ ವಿಹಾರ, ಆನಂದಾಶ್ರಮ, ಅನಂತಪುರ ದೇವಸ್ಥಾನ ಹಾಗು ರಾಣಿಪುರ ನಿಸರ್ಗಧಾಮ ಈ ಮೊದಲಾದ ಪ್ರವಾಸಿತಾಣಗಳಲ್ಲಿ ಬೇಕಲ ಕೋಟೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ.

ಕೆಳದಿಯ ಪ್ರತಾಪಿ ದೊರೆ ಶಿವಪ್ಪನಾಯಕನಿಂದ ನಿರ್ಮಿಸಲ್ಪಟ್ಟ, 360 ವರ್ಷಗಳ ಐತಿಹಾಸಿಕ ಹಿನ್ನೆಲೆಯಿರುವ ಉತ್ತರ ಕೇರಳದ ಕರಾವಳಿ ತೀರದ ಕನ್ನಡಿಗರ ಹೆಮ್ಮೆಯ ತಾಣ ಬೇಕಲಕೋಟೆ. ಕೆಳದಿ ನಾಯಕರ ರಾಜ್ಯ ಹಾಗು ಅರಸೊತ್ತಿಗೆ ಕಾಲಗರ್ಭಕ್ಕೆ ಸೇರಿ ಇದು ಇತಿಹಾಸದ ಪುಟಗಳನ್ನಲಂಕರಿಸಿದೆ. ಈ ಕಾಲಘಟ್ಟದಲ್ಲಿ ಕೇಂದ್ರ ಸರ್ಕಾರದ ಸುಪರ್ದಿಗೊಳಪಟ್ಟ ಬೇಕಲಕೋಟೆ ಇದೀಗ ಗತ ಇತಿಹಾಸ ದೃಕ್ಸಾಕ್ಷಿಯಾಗಿ ಪ್ರವಾಸಿಗರ ಮನಸೂರೆಗೊಳ್ಳುವ ಸುಪ್ರಸಿದ್ಧ ವಿಹಾರಕೇಂದ್ರವಾಗಿ ಮೂಡಿಬಂದಿದೆ.

ಹಿಂದೆ ದಕ್ಷಿಣ ಕನ್ನಡದ ಭಾಗವಾಗಿದ್ದ ಈ ಪ್ರದೇಶ ನಂತರ ಕೇರಳ ರಾಜ್ಯ ರೂಪುಗೊಂಡಾಗ ಅದರಲ್ಲಿ ಸೇರ್ಪಡೆಗೊಂಡಿತು. ಪ್ರಸ್ತುತ ಕೇರಳದಲ್ಲಿ ತನ್ನ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡಿರುವ ಇನ್ನೊಂದು ಕೋಟೆ ಇಲ್ಲ. ಸಮುದ್ರ ಸಾನಿಧ್ಯದ ಗುಡ್ಡಪ್ರದೇಶದಲ್ಲಿ ಸುಮಾರು 35 ಎಕರೆ ವಿಸ್ತೀರ್ಣದಲ್ಲಿ ಭದ್ರವಾಗಿ ತಳವೂರಿದೆ ಈ ಬೇಕಲಕೋಟೆ.

ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿರುವ ಈ ಕೋಟೆ ಮಂಗಳೂರಿನಿಂದ 76ಕಿ.ಮೀ



ದೂರದಲ್ಲಿದೆ. ಕಾಸರಗೋಡು ಜಿಲ್ಲಾ ಕೇಂದ್ರದಿಂದ 14ಕಿ.ಮೀ ಅಂತರದಲ್ಲಿ ಹೊಸದುರ್ಗ ತಾಲೂಕಿನ ರಾಷ್ಟ್ರೀಯ ಹೆದ್ದಾರಿ–66 ರ ಮಗ್ಗುಲಲ್ಲಿ ಇದೆ.

**ಕೋಟೆಯ ಪರಿಚಯ**

ಕೋಟೆ ಪ್ರವೇಶಕ್ಕೆ ಹೋದಾಗ ಮೊದಲು ಸಿಗುವುದು ಹೆಬ್ಬಾಗಿಲು. ಅಂದು ವೈರಿಗಳ ಆಕ್ರಮಣದಿಂದ ರಕ್ಷಿಸಲು ಹೆಬ್ಬಾಗಿಲನ್ನು ಮುಚ್ಚುತ್ತಿದ್ದರು. ಹೆಬ್ಬಾಗಿಲಿನ ಎಡಬಲಗಳಲ್ಲಿ ಕೋಟೆಯ ಮೇಲ್ಭಾಗದಲ್ಲಿ ಬುರುಜುಗಳಿವೆ. ಅಲ್ಲಿ ನಿಂತು ಸೈನಿಕರು ಕೆಳಗಿನ ಶತ್ರುಗಳ ಮೇಲೆ ಕಲ್ಲು, ಬಿಸಿ ಎಣ್ಣೆಯನ್ನು ಎರಚುತ್ತಿದ್ದರು ಎನ್ನಲಾಗಿದೆ.

ಕೋಟೆಯ ಕೆಳಭಾಗದ ಸುತ್ತಲೂ ಕಂದಕಗಳಿವೆ. ಇದು ಕೋಟೆಯ ಹೊರಭಾಗದಲ್ಲಿ ಉತ್ತರದಿಂದ ಪೂರ್ವದವರೆಗೂ ವ್ಯಾಪಿಸಿವೆ. ವೈರಿಗಳು ಪಕ್ಕನೆ ಮೇಲೇರದಂತೆ ಈ ಕಂದಕಗಳಲ್ಲಿ ನೀರನ್ನು ತುಂಬಿಸಿಡಲಾಗುತ್ತಿತ್ತು.

ಕೋಟೆಯೊಳಗೆ ಪ್ರವೇಶಿಸಿದಾಗ ಪಕ್ಕದಲ್ಲಿ ಪುಟ್ಟದೊಂದು ಆಂಜನೇಯನ ದೇವಸ್ಥಾನ. ಇವನು ಈ ಕೋಟೆಯ ರಕ್ಷಕ. ದೇವಸ್ಥಾನದ ಒಳಗಡೆ ರಾಮಾಯಣ ಕಥೆಯನ್ನು ಕೆತ್ತಲಾಗಿದೆ.

ಒಂದು ಕಾಲದಲ್ಲಿ ಈ ಕೋಟೆ ಒಂದು ಸಣ್ಣ ಪಟ್ಟಣವಾಗಿತ್ತು. ಇಲ್ಲಿ ದೇವಾಲಯ, ಕುದುರೆ ಲಾಯ, ಸಣ್ಣ ದೊಡ್ಡ ಮನೆಗಳ ಅವಶೇಷಗಳು ಕಂಡುಬರುತ್ತವೆ.

ಕೋಟೆಯ ಎಂಟು ಮೂಲೆಗಳಲ್ಲೂ ಒಂದೊಂದು ಬುರುಜುಗಳಿವೆ. ಅಲ್ಲಿ ನಿಂತು ಸೈನಿಕರು ವೈರಿಗಳ ಆಗಮನವನ್ನು ತಿಳಿಯುತ್ತಿದ್ದರು ಮತ್ತು ತಡೆಯುತ್ತಿದ್ದರು.

ಈ ಕೋಟೆಯ ಒಳಗಡೆ ಅಕ್ಕ ಪಕ್ಕದಲ್ಲಿ ಒತ್ತೊತ್ತಾಗಿ ಎರಡು ಬಾವಿಗಳಿವೆ. ಅದನ್ನು ಅಕ್ಕ ತಂಗಿಯರ ಬಾವಿ ಎಂದು ಕರೆಯುತ್ತಾರೆ. ಹಿಂದೆ ಯುದ್ಧದಲ್ಲಿ ವೀರ ಸೈನಿಕರು ಮಡಿದಾಗ ಅವರ ಹೆಂಡತಿಯರು ಈ ಬಾವಿಗಳಿಗೆ ಹಾರಿ ತಾವೂ ಪ್ರಾಣತ್ಯಾಗ ಮಾಡುತ್ತಿದ್ದರಂತೆ. ಈ ಬಾವಿಗಳಲ್ಲಿ ಎರಡು ಹಾವೆ ಮೂಗುತಿಗಳು ಸಿಕ್ಕಿವೆಯಂತೆ. ಆದ್ದರಿಂದ ಈ ಬಾವಿಯನ್ನು ಮೂಗುತಿ ಬಾವಿಗಳು ಎಂದೂ ಕರೆಯುವುದು ವಾಡಿಕೆ.

ಈ ಕೋಟೆಯೊಳಗೆ ಇನ್ನೂ ಅಲ್ಲಲ್ಲಿ ಚಿಕ್ಕ ದೊಡ್ಡ ಬಾವಿಗಳಿದ್ದವು. ಆನೆ ಕುದುರೆಗಳಿಗೆ ಮೀಯಲು ಬೇಕಾದ ಕೆರೆಕೊಳಗಳೂ ಇದ್ದವು. ಇವೆಲ್ಲವೂ ಬತ್ತಿಹೋದುದರಿಂದ ಇಂದು ಬರಿಯ ಹೊಂಡಗಳಾಗಿ ಕಾಣುತ್ತಿವೆ.

ಹಾಗೆಯೇ ಕೋಟೆಯ ಒಂದೊಂದು ಬದಿಯಲ್ಲಿ ಸಿಮೆಂಟಿನಿಂದ ಕಟ್ಟಿದ ಹಾಗೆ ಕಾಣುವ ಒಂದು ಕಟ್ಟಡವಿದೆ. ಆದರೆ ಇದು ಸಿಮೆಂಟಿನಿಂದ ಕಟ್ಟಿದುದಲ್ಲ, ಆದರೂ ಅದಕ್ಕಿಂತ ಗಟ್ಟಿಯದು. ಇದರಲ್ಲಿ ಮದ್ದು ಗುಂಡುಗಳನ್ನು ಸಂಗ್ರಹಿಸುತ್ತಿದ್ದರು.

ಕೋಟೆಯೊಳಗೊಂದು ಕಿಂಡಿ ಇದೆ. ಅದು ಕಳ್ಳಗಂಡಿ. ಹಿಂದೆ ವೈರಿಗಳೆಲ್ಲಾದರೂ ಒಳಪ್ರವೇಶಿಸಿದರೆ ಒಳಗಿದ್ದವರು ಈ ಕಿಂಡಿಗಳ ಮೂಲಕ ನುಸುಳಿ ಪಾರಾಗುತ್ತಿದ್ದರಂತೆ. ಈ ಕಳ್ಳಗಂಡಿಯ ಮೂಲಕ ಪ್ರವೇಶಸಿದರೆ ವಿಶಾಲವಾದ ಸಮುದ್ರದಂಡೆಗೆ ಬಂದು ಸೇರುತ್ತದೆ.

ಕೋಟೆಯ ಮಧ್ಯಭಾಗದಲ್ಲಿ ಬತ್ತೆರಿಯೊಂದಿದ್ದು ಅದರ ಮೇಲೆ ನಿಂತರೆ ಕೋಟೆಯ ನಾಲ್ಕೂ ದಿಕ್ಕುಗಳಲ್ಲೂ, ವಿಶಾಲವಾದ ಸಮುದ್ರವಿದ್ದು ಬಹು ಸುಂದರವಾಗಿ ಕಾಣುತ್ತದೆ.

ಒಂದು ಕಾಲದಲ್ಲಿ ಮಂಗಳೂರಿನಿಂದ ನೀಲೇಶ್ವರದವರೆಗೆ ವ್ಯಾಪಿಸಿದ್ದ ಇಕ್ಕೇರಿ ನಾಯಕರ ರಾಜ್ಯಕ್ಕೆ ಈ ಕೋಟೆ ಸೈನ್ಯ ಸಂಗ್ರಹ ಕೇಂದ್ರವಾಗಿತ್ತು. ಅವರ ನಂತರ ಈ ಕೋಟೆಯು ಮೈಸೂರಿನ ಹೈದರಾಲಿ ಹಾಗು ಟಿಪ್ಪು ಸುಲ್ತಾನನ ವಶವಾಯಿತು. ಮತ್ತೆ ಇದನ್ನು ಬ್ರಿಟೀಷರು ವಶಪಡಿಸಿಕೊಂಡಿದ್ದರು. ಭಾರತವು ಸ್ವತಂತ್ರವಾದಾಗ ಈ ಪುರಾತನ ಕೋಟೆಯು ಪ್ರವಾಸಿ ಕೇಂದ್ರವಾಗಿ ಮಾರ್ಪಟ್ಟಿತು. ಇಂದು ಇದು ಕಾಸರಗೋಡು ಜಿಲ್ಲೆಯಲ್ಲೇ ಪ್ರಸಿದ್ಧವಾದ ಪ್ರಾಚೀನ ಕೋಟೆಯಾಗಿದೆ. ಕೇರಳ ಸರಕಾರ ಇದನ್ನು ಚಿರಕಾಲ ಉಳಿಸಲು ಸಾಕಷ್ಟು ಹಣ ವಿನಿಯೋಗಿಸುತ್ತಿದೆ. ದೂರದಿಂದ ಬಂದು ಕೆಲದಿನ ಇಲ್ಲೇ ಉಳಿಯುವ ದೇಶ ವಿದೇಶದ ಪ್ರವಾಸಿಗರಿಗಾಗಿ ದೊಡ್ಡ ಪ್ರವಾಸಿ ಮಂದಿರವನ್ನು ಕಟ್ಟಲಾಗಿದೆ. ಪುಂಡ ಪೋಕರಿಗಳಿಂದ ತೊಂದರೆಯಾಗದಂತೆ ಕಾಯಲು ಕಾವಲುಗಾರರೂ ಇಲ್ಲಿದ್ದಾರೆ. ಒಳಗೆಲ್ಲಾ ಅಡ್ಡಾಡಲು ಕಲ್ಲುಹಾಸಿನ ರಸ್ತೆಗಳೂ ಇವೆ.

ಬೇಕಲಕೋಟೆಯನ್ನೇ ಕೇಂದ್ರೀಕರಿಸಿಕೊಂಡು ಇದನ್ನು ಅಂತರಾಷ್ಟ್ರೀಯ ಪ್ರವಾಸಿಕೇಂದ್ರವಾಗಿಸುವ ಯೋಜನೆ ಕಳೆದ ಕೆಲವು ವರ್ಷಗಳಿಂದ ಸಕಾರಗೊಳ್ಳುವ ನಿಟ್ಟಿನಲ್ಲಿದೆ. ಇದಕ್ಕಾಗಿ ಬೇಕಲ್ ರಿಸಾರ್ಟ್ ಡೆವಲಪ್‌ಮೆಂಟ್ ಕಾರ್ಪೋರೇಶನ್ (ಬಿ.ಆರ್.ಡಿ.ಸಿ) ಎಂಬ ಸಂಸ್ಥೆ ಕೇರಳ ಸರ್ಕಾರದ ಮೂಲಕ ಕೇಂದ್ರ ಸರ್ಕಾರದ ಅಧೀನತೆಯಲ್ಲಿ ಅಸ್ತಿತ್ವಕ್ಕೆ ಬಂದಿದೆ.

**ಸಂತೋಷ್ ವರ್ಕಾಡಿ**

# ನೋಡಬನ್ನಿ ದೇವರಗುಂಡಿ ಜಲಪಾತ

ಪಿಕ್‌ನಿಕ್‌ಗಾಗಿ ಸ್ಥಳ ಹುಡುಕಾಟವೇ? ಹಾಗಾದರೆ ಪಶ್ಚಿಮ ಘಟ್ಟದ ದಟ್ಟಕಾನನದ ನಡುವಲಿ ಭೋರ್ಗರೆವ ದೇವರಗುಂಡಿ ಜಲಪಾತ ನೋಡಬನ್ನಿ. ದಕ್ಷಿಣ ಕನ್ನಡ ಹಾಗು ಕೊಡಗು ಜಿಲ್ಲೆಯ ಗಡಿನಾಡ ಭಾಗದಲ್ಲಿ ಈ ಜಲಪಾತ ಹರಿಯುತ್ತದೆ. ಸುಳ್ಯದಿಂದ ಸುಮಾರು ಹನ್ನೊಂದು ಕಿ.ಮೀ. ಮಡಿ–ಕೇರಿ ಮಾರ್ಗವಾಗಿ ಪ್ರಯಾಣಿಸಿದರೆ ಅರಂತೋಡು ಎಂಬ ಪೇಟೆ. ಅಲ್ಲಿಂದ ಬಲಭಾಗದ ರಸ್ತೆಯಲ್ಲಿ ಆರು ಕಿ.ಮೀ. ದೂರದಲ್ಲಿ ಪೌರಾಣಿಕ , ಐತಿಹಾಸಿಕ ದೇವಾಲಯ ತೊಡಿಕ್ಕಾನ ಮಲ್ಲಿಕಾರ್ಜುನ ಕ್ಷೇತ್ರ ಸಿಗುತ್ತದೆ.

ದೇವಾಲಯ ಹಾಗೂ ಮತ್ಸ್ಯ ತೀರ್ಥನದಿಯ ದರ್ಶನ ಮಾಡಿ ಅದೇ ಮಾರ್ಗವಾಗಿ ಸುಮಾರು ಹದಿನೈದರಿಂದ ಇಪ್ಪತ್ತು ನಿಮಿಷ ಕಾಲ್ನಡಿಗೆಯಲ್ಲಿ ಸಾಗಿದರೆ ಕಣ್‌ಮನ ಸೆಳೆಯುವ ದೇವರಗುಂಡಿ ಜಲಪಾತ ದುಮ್ಮಿಕ್ಕುವ ಸೊಬಗನ್ನು ಸವಿಯಬಹುದು.



ಸುಮಾರು ಹತ್ತರಿಂದ ಹದಿನೈದು ಅಡಿ ಎತ್ತರದಿಂದ ಧುಮುಕುವ ಈ ಜಲಪಾತವು ಪಟಮಲೆಯ ಘಾಟಿಯಲ್ಲಿ ಜನಿಸಿ ಪುಟ್ಟ ತೊರೆಯಾಗಿ ಬಂದುಬೀಳುವ ಜಲಧಾರೆಯಾಗಿದೆ. ದೇವರಗುಂಡಿ ಜಲಪಾತದ ನೀರು ಮುಂದೆ ಮತ್ಸ್ಯ ತೀರ್ಥವಾಗಿ ತೊಡಿಕ್ಕಾನ ದೇವಾಲಯದ ಬಳಿ ಹರಿಯುತ್ತದೆ.

ಈ ಜಲ ಪಾತಕ್ಕೆ ಪೌರಾಣಿಕ ಇತಿಹಾಸವೂ ಇದೆ. ಪಾಂಡವರು ಈ ಪ್ರದೇಶಕ್ಕೆ ವನವಾಸದ ಸಮಯದಲ್ಲಿ ಬಂದು ನೆಲೆಸಿದ್ದರೆಂದೂ ಅರ್ಜುನ ಶಿವನಿಂದ ಪಾಶುಪತಾಸ್ತ್ರ ಪಡೆಯಲು ತಪಸ್ಸು ಮಾಡಿದ ಪ್ರದೇಶವಿದು ಎಂಬ ಪ್ರತೀತಿ ಇದೆ.

ಜಲಪಾತದ ರಮಣೀಯ ದೃಶ್ಯವನ್ನು ಕಣ್‌ತುಂಬಿಕೊಳ್ಳಲು ಈ ಪ್ರದೇಶವು ಪ್ರಶಸ್ತ ಸ್ಥಳವಾಗಿದೆ. ಇಲ್ಲಿ ಕಾನನದ ಮಡಿಲಲ್ಲಿ ತಂಪಾದ ಗಾಳಿ ಇಂಪಾದ ಹಕ್ಕಿಗಳ ಕಲರವದ ಜೊತೆಗೆ ನೀರಿನ ಕಲರವ ನಿನಾದ ಮನಕ್ಕೆ ಮುದ ನೀಡುವುದರಲ್ಲಿ ಸಂದೇಹವಿಲ್ಲ.

ಈ ಪ್ರದೇಶದಲ್ಲಿ ನೀರಿನಧಾರೆಯ ಜೊತೆ ಆಡೋಣವೆಂದರೆ ಅಪಾಯ ಖಚಿತ. ಜಲಪಾತವು ಆಳವಾಗಿರುವುದರಿಂದ ಜಾಗರೂಕತೆ ಅಗತ್ಯಗತ್ಯವಾಗಿದೆ. ಹರಿಯುವ ಜಲಪಾತ ವೀಕ್ಷಣೆಗೆ ಸೂಕ್ತ ಕಾಲಮಾನವೆಂದರೆ ಅಕ್ಟೋಬರ್‌ನಿಂದ ಫೆಬ್ರವರಿಯ ಸಮಯ.

**ವೈಷ್ಣವಿ**

# ನೂತನ ಕುಲಸಚಿವರಾಗಿ ಪ್ರೊ. ಕೆಂಪರಾಜು



ನೂತನ ಕುಲಸಚಿವರಾಗಿ ಪ್ರೊ.ಕೆಂಪರಾಜು(ಎಡದಿಂದ ಬಲಕ್ಕೆ) ಪ್ರೊ.ಯಡಪಡಿತ್ತಾಯರಿಂದ ಹೂ ಗುಚ್ಛ ಸ್ವೀಕರಿಸುತ್ತಿರುವುದು.

**ಮಂಗಳಗಂಗೋತ್ರಿ:** ಪ್ರೊ. ಪಿ. ಎಸ್ ಯಡಪಡಿತ್ತಾಯರಿಂದ ತೆರವಾದ ಮಂಗಳೂರು ವಿವಿಯ ಕುಲಸಚಿವ ಸ್ಥಾನಕ್ಕೆ ಬೆಂಗಳೂರು ವಿವಿಯ ಗ್ರಂಥ ವಿಜ್ಞಾನ ಪ್ರಾಧ್ಯಾಪಕರಾಗಿದ್ದ ಡಾ. ಟಿ.ಡಿ ಕೆಂಪರಾಜು ಅವರು ನವೆಂಬರ್ ತಿಂಗಳಲ್ಲಿ ಅಧಿಕಾರ ಸ್ವೀಕರಿಸಿದರು.

ಕೆಂಪರಾಜು ಇವರು ಮೂಲತಃ ಮಂಡ್ಯ ಜಿಲ್ಲೆಯವರಾಗಿದ್ದು ಅವರು ಮೈಸೂರು ವಿವಿಯಲ್ಲಿ ಗ್ರಂಥ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಅವರು 1981ರಲ್ಲಿ ಬೆಂಗಳೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹಾಗೂ ವಿಭಾಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಅವರ 34 ವರ್ಷಗಳ ಪ್ರಾಧ್ಯಾಪನ ಸೇವೆಯಲ್ಲಿ ಅವರು 36 ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಶೋಧನ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಅವರು ಯು.ಜಿ.ಸಿಯ ಮುಖ್ಯ ಸಂಶೋಧನಾ ಯೋಜನೆಯ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಅವರು ಬೆಂಗಳೂರು ವಿವಿಯಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅವರು ಪ್ಲಾನಿಂಗ್ ಮಾನಿಟರಿಂಗ್ ಮತ್ತು ಇವಾಲ್ಯುವೇಷನ್ ನಿರ್ದೇಶನಾಲಯದ ನಿರ್ದೇಶಕರಾಗಿ, ಹಾಗೂ ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾ–ಗಿಯೂ ಸೇವೆಸಲ್ಲಿಸಿದ್ದಾರೆ.

# ಭರತನಾಟ್ಯ ಪ್ರವೀಣೆ ಪುತ್ತೂರಿನ ಕುವರಿ

ಭರತನಾಟ್ಯದಲ್ಲಿ ತನ್ನ ಅಸಾಧಾರಣ ಸಾಧನೆಯಿಂದ ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಪುತ್ತೂರಿನ ಭರತನಾಟ್ಯ ಪ್ರತಿಭೆ ನಿಶಿತಾ ಪುತ್ತೂರು. ಪ್ರಸ್ತುತ ಮಂಗಳೂರು ವಿವಿಯ ಆಂಗ್ಲ ವಿಭಾಗದ ಸಂಶೋಧನಾ ವಿದ್ಯಾರ್ಥಿ.



ಇವರು ಕಳೆದ 17 ವರ್ಷಗಳಿಂದ ಭರತನಾಟ್ಯ ತರಬೇತಿ ಪಡೆದು ಈಗಾಗಲೇ 1000ಕ್ಕೂ ಅಧಿಕ ಕಾರ್ಯಕ್ರಮ ನೀಡಿದ್ದಾರೆ. ಅಲ್ಲದೆ ಇವರು ಸಂಗೀತದಲ್ಲಿಯೂ ಪ್ರತಿಭಾನ್ವಿತೆ. ಸಾಂಸ್ಕೃತಿಕ ಕ್ಷೇತ್ರದ ಕಡೆಗೆ ಒಲವು ಮೂಡಲು ಪೋಷಕರೇ ಸ್ಫೂರ್ತಿಯ ಸೆಲೆ. ತಂದೆ ಸಂಸ್ಕೃತ ಉಪನ್ಯಾಸಕ ಪ್ರೊ.ಡಿ ಈಶ್ವರ ಶಾಸ್ತ್ರಿಯವರು ಉತ್ತಮ ಚೆಂಡೆವಾದಕರು. ತಾಯಿ ಉಮಾ ಡಿ. ಶಾಸ್ತ್ರಿ ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಹಂಬಲ ಹೊಂದಿದವರು. ಹೀಗಾಗಿ ಬಾಲ್ಯದಿಂದಲೇ ನಿಶಿತಾಳ ಚಿತ್ತ ಭರತನಾಟ್ಯದೆಡೆಗೆ ಸೆಳೆಯಿತು.

ಏಳನೇ ವಯಸ್ಸಿನಲ್ಲಿ ಭರತನಾಟ್ಯ ಕಲಿಯಲು ಹೊರಟ ಈಕೆಯ ಮೊದಲ ಗುರು ಉಮಾ ಸುದರ್ಶನ್. ನಂತರ ಹೆಚ್ಚಿನ ಅಧ್ಯಯನವನ್ನು ಬಾಲಕೃಷ್ಣ ಮಂಜೇಶ್ವರ ಅವರ ಬಳಿಯಲ್ಲಿ ಪಡೆಯುತ್ತಿದ್ದಾರೆ. ಕುಚುಪುಡಿ ಹಾಗೂ ಮೋಹಿನಿಯಾಟ್ಟಮ್‌ನಲ್ಲಿ ವಿಶೇಷ ಪರಿಣತಿ ಪಡೆದಿದ್ದಾರೆ.

ಇವರು ಶಾಸ್ತ್ರೀಯ ಸಂಗೀತವನ್ನು ದತ್ತಾತ್ರೇಯ ರಾವ್ ಅವರ ಬಳಿ ಪ್ರಾರಂಭದಲ್ಲಿ ಕಲಿತರು. ಮುಂದೆ ಕಾಂಚನ ನಾರಾಯಣ ಭಟ್, ಆಕಾಶವಾಣಿ ಕಲಾವಿದರಾದ ಶ್ರೀನಿವಾಸ ಮರಾಠೆ ಅವರಲ್ಲಿ ವಿದ್ಯಾಭ್ಯಾಸ ಪಡೆದು ಈಗ ಕಾಸರಗೋಡು ಶ್ರೀನಿವಾಸ ಅವರ ಬಳಿ ಕಲಿಯುತ್ತಿದ್ದಾರೆ.

ಪುತ್ತೂರಿನ ರಾಮಕೃಷ್ಣದ ಶಾಲೆಯಲ್ಲಿ ಭರತನಾಟ್ಯ ರಂಗ ಪ್ರವೇಶಿಸಿದ ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಮಂಡ್ಯದ ಗುರುದೇವ ಲಲಿತಕಲಾ ಅಕಾಡೆಮಿಯ ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ, ಧಾರವಾಡದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ವಿಭಾಗೀಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ, ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಜರುಗಿದ ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ, ಮಂಗಳೂರು ವಿಶ್ವವಿದ್ಯಾಲಯ ವತಿಯಿಂದ ಕುಂದಾಪುರದಲ್ಲಿ ಪ್ರಥಮ, ಇಲ್ಲಿಆಯ್ಕೆಗೊಂಡು ಚೆನ್ನೈ ಸತ್ಯಭಾಮಾ ವಿಶ್ವವಿದ್ಯಾಲಯದ ವತಿಯಿಂದ ನಡೆದ ದಕ್ಷಿಣ ಭಾರತ ವಲಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ.

ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ನಾಗಪುರದಲ್ಲಿ ನಡೆದ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದಾರೆ. ತಿರುಪತಿಯಲ್ಲಿ ನಡೆದ ವಲಯ ಮಟ್ಟದ ಸ್ಪರ್ಧೆಯಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿ ತೃತೀಯ ಬಹುಮಾನ ಪಡೆದರು. ಶಿರಸಿಯ ಸ್ವರ್ಣವಲ್ಲಿ ಮಠದಲ್ಲಿ ನಡೆದ ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಇದರೊಂದಿಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಕರ್ನಾಟಕ ಮಾತ್ರವಲ್ಲದೆ ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಚಂದನ ವಾಹಿನಿಯಲ್ಲಿನ ನೂಪುರನಾದದಲ್ಲಿ ಕಾರ್ಯಕ್ರಮ ಪ್ರಸಾರಗೊಂಡಿದೆ.

ನಿಶಿತಾ ಭರತನಾಟ್ಯ, ಲಯಬದ್ಧ ಹಾಡುಗಾರಿಕೆಯ ಜೊತೆಯಲ್ಲಿ ಕಾರ್ಯಕ್ರಮ ನಿರೂಪಣೆಯಲ್ಲಿಯೂ ಎತ್ತಿದ ಕೈ. ಇವರು ರಾಷ್ಟ್ರೀಯ ಮಹಿಳಾ ಅಧ್ಯಯನ ಕೇಂದ್ರದಿಂದ ನಡೆದ ರಾಜ್ಯಮಟ್ಟದ ವಿಚಾರ ಗೋಷ್ಠಿಯಲ್ಲಿ, ದತ್ತಿ ಪೀಠದ ಉಪನ್ಯಾಸ ಕಾರ್ಯಕ್ರಮಕ್ಕೆ ನಿರೂಪಣೆಯನ್ನು ನೀಡಿದ್ದಾರೆ. ನಿರೂಪಣಾ ಕಲೆಯು ಇವರ ಪಾಲಿಗೆ ಒಲಿದು ಬಂದಿದೆ. ಇವರ ಮಹದಾಸೆಯೆಂದರೆ ಭರತನಾಟ್ಯದಲ್ಲಿ ಪಿಎಚ್‌ಡಿ ಮಾಡಬೇಕೆಂದಿದ್ದಾರೆ.

**ವೈಷ್ಣವಿ ಎಂ.ಎಸ್**

# ಸೋಲೇ ಗೆಲುವಿನ ಸೋಪಾನ

'ಯಾರಿಗುಂಟು ಯಾರಿಗಿಲ್ಲ, ಬಾಳೆಲ್ಲ ಬೇವು ಬೆಲ್ಲ' ಎಂಬ ಕವಿವಾಣಿಯಂತೆ ಸೋಲು ಗೆಲುವು ಮನುಷ್ಯನ ಬಾಳಿನಲ್ಲಿ ಹಗಲು ರಾತ್ರಿಯಂತೆ ಬಂದು ಹೋಗುತ್ತದೆ. ಈ ಲೋಕದಲ್ಲಿ ಸೋಲೆಂಬುದಿಲ್ಲದ್ದಲ್ಲಿ ಗೆಲುವಿಗೂ ಸ್ಥಾನವಿಲ್ಲ. ಒಬ್ಬ ಗೆಲ್ಲಬೇಕಾದರೆ ಇನ್ನೊಬ್ಬ ಸೋಲಲೇಬೇಕು. ಇದು ಜಗದ ನಿಯಮ. ಕೇವಲ ಗೆಲುವೊಂದನ್ನು ಮಾತ್ರ ಅರಸಿ ಸೋಲನ್ನು ತಿರಸ್ಕರಿಸಿದರೆ ಈ ಜೀವನ ನಿಸ್ಸಾರವಾಗಿ ತನ್ನೆಲ್ಲಾ ಆಕರ್ಷಣೆಗಳನ್ನು ಕಳೆದುಕೊಳ್ಳುತ್ತದೆ.

ಗೆಲುವಿನಿಂದ ಹೊಸ ಚೈತನ್ಯ ಹುರುಪು ದೊರಕಿದರೂ ಅಷ್ಟೇ ಅತಿರೇಕಗಳಿಗೂ ಎಡೆಮಾಡಿಕೊಡುತ್ತದೆ. ಆದರೆ ಸೋಲೆಂಬುದು ಹಾಗಲ್ಲ ಅದೊಂದು ಹೊಸ ಪಾಠವಾಗಿ ಗೆಲ್ಲಲೇಬೇಕು ಎಂಬ ಗುರಿಯಿದೆ. ಪ್ರತಿಯೊಂದು ಸೋಲು ಕೂಡ ಒಬ್ಬ ವ್ಯಕ್ತಿಯಲ್ಲಿನ ತಪ್ಪಿಗೆ ಕನ್ನಡಿ ಹಿಡಿದಂತಾಗಿ ವ್ಯಕ್ತಿತ್ವ ವಿಕಸನಕ್ಕೆ ಹೊಸ ಅಧ್ಯಾಯವಾಗುತ್ತದೆ.

ಹೃದಯವಂತಿಕೆ, ಕಾರ್ಯತತ್ಪರತೆ ಮತ್ತು ವಿಚಾರ ಶಕ್ತಿ ಈ ಮೂರು ಗುಣಗಳನ್ನು ಹೊಂದಿರುವವನು ಯಶಸ್ವಿ ವ್ಯಕ್ತಿಯಾಗುತ್ತಾನೆ. ಆದರೆ ಒಬ್ಬ ವ್ಯಕ್ತಿಯಲ್ಲಿ ಇಲ್ಲಿರುವ ಎರಡು ಗುಣಗಳಿರುವುದೇ ಅತೀ ಕಡಿಮೆ. ವಿವೇಕಾನಂದರು ಹೇಳುವಂತೆ ಸೋಲನ್ನು ಲೆಕ್ಕಿಸದೆ ಇರುವುದು ಯಶಸ್ಸಿಗೆ ಕಾರಣವಾಗುತ್ತದೆ. ಇದಕ್ಕೆ ಜೀವಂತ ಉದಾಹರಣೆಯಾಗಿದ್ದವರು ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್. ಇವರು ತಮ್ಮ ಜೀವನದಲ್ಲಿ ಹನ್ನೊಂದು ಬಾರಿ ಸೋತರೂ ಕೊನೆಗೆ ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾದವರು.

ಒಂದು ಕಾರ್ಯ ಸಾಧಿಸಲು ದೀರ್ಘ ಮತ್ತು ಸತತ ಪ್ರಯತ್ನ ಅವಶ್ಯಕ.ಇದನ್ನು ಒಪ್ಪಿಕೊಳ್ಳಬೇಕೇ ಹೊರತು ಇದರಿಂದ ಮುಖ ತಿರುಗಿಸಿ ಪಲಾಯನ ಮಾಡಬಾರದು. ಲೋಕದಲ್ಲಿರುವ ಎಲ್ಲರೂ ಮೇಧಾವಿಗಳೂ ಹಾಗೂ ಸರ್ವಜ್ಞರು ಅಲ್ಲ. ಸೋಲು ನಮ್ಮಲ್ಲಿರುವ ಅಸಾಮರ್ಥ್ಯಕ್ಕೆ ಪೆಟ್ಟು ನೀಡಿ ನಮ್ಮ ದೌರ್ಬಲ್ಯಗಳನ್ನು ಹೋಗಲಾಡಿಸಿ ಹೊಸ ರೂಪವನ್ನು ನೀಡುವುದೇ ಸೋಪಾನ.

ಸೋಲನ್ನು ಗೆಲುವಾಗಿ ಪರಿವರ್ತಿಸಿಕೊಳ್ಳುವವರು ಬುದ್ಧಿವಂತರಾದರೆ, ಸೋಲಿನಿಂದಲೇ ಪಾಠ ಕಲಿತು ಸುವರ್ಣಾಕ್ಷರಗಳಲ್ಲಿನ ತಮ್ಮ ಹೆಸರು ದಾಖಲಿಸುವವರು ಮಹಾತ್ಮರು.'ಬೆಂದರೆ ಬೇಂದ್ರೆಯಾಗುವೆ' ಎಂದು ಸ್ವತಃ ಬೇಂದ್ರೆಯವರೇ ಹೇಳಿಕೊಂಡಿದ್ದಾರೆ. ಆಶಾವಾದಿಯು ಮರೆಯಲು ನಗುತ್ತಾನೆ, ನಿರಾಶಾವಾದಿಯು ನಗಲು ಮರೆಯುತ್ತಾನೆ. ನಾವು ಆಶಾವಾದಿಗಳೇ ನಿರಾಶಾವಾದಿಗಳೇ ಎಂಬುದು ನಮ್ಮ ನಗುವಿನ ಮೇಲೆ ನಿಂತಿದೆ. ನಮಗೆ ನಾವೇ ಹೊಣೆಗಾರರಾದಾಗ ಇಂತಹ ಕ್ಷಣಿಕ ಹಾಗೂ ಕ್ಷುಲ್ಲಕ ಸೋಲಿಗೆ ತಲೆಕೆಡಿಸಿಕೊಳ್ಳದೆ ಒಬ್ಬ ಮಹಾನ್ ವ್ಯಕ್ತಿ ಆಗಬಹುದು. ಆದ್ದರಿಂದ "ಸೋಲೇ ಗೆಲುವಿನ ಸೋಪಾನ, ದುಡುಕದೆ ನಡೆ ಜೋಪಾನ".

**ದಯಾನಂದ ಜಿ**

# ಮಹಿಳಾ ಭಾರತ –'ವರ್ತಮಾನದೊಂದಿಗೆ ಗತಕಾಲದ ಮಹಿಳಾ ಪಾತ್ರಗಳ ಸಂವಾದ'

ಹೌದು, ಮಹಿಳೆಯರಿಂದಲೇ ಕೂಡಿರುವ ಈ ಕಥೆ ಮಹಿಳಾ ಭಾರತವನ್ನು ಸೃಷ್ಟಿಸಿದೆ. ಇದು ಮಹಿಳೆಯರ ಭಾರತ! ಇಲ್ಲಿ ಬರೀ ಮಹಿಳೆಯರದ್ದೇ ಪ್ರಧಾನ ಪಾತ್ರ. ಮಹಾಭಾರತದ ಸ್ತ್ರೀ ಪಾತ್ರಗಳೆಲ್ಲಾ ಒಟ್ಟಾಗಿ ಸೇರಿ ವರ್ತಮಾನದ ಮಹಿಳೆಯರ ಸಮಸ್ಯೆ, ನೋವಿನೊಂದಿಗೆ ಬೆರೆತು ಮಾತನಾಡುವ ಭಾರತವಿದು.

ಉಡುಪಿಯ ಸಾಂಸ್ಕೃತಿಕ ರಂಗ ಸಂಘಟನೆಯಾದ ರಥಬೀದಿ ಗೆಳೆಯರು 'ಮಹಿಳಾ ಭಾರತ' ವೆಂಬ ನಾಟಕವನ್ನು ಇತ್ತೀಚೆಗೆ ಪ್ರದರ್ಶಿಸಿದರು. ನಿರ್ದೇಶಕ ಡಾ.ಶ್ರೀಪಾದ ಭಟ್ಟರ ನಿರ್ದೇಶನದಲ್ಲಿ ಕಾಲೇಜು ವಿದ್ಯಾರ್ಥಿಗಳು ಅಭಿನಯಿಸಿದ ನಾಟಕ. ಮಹಿಳಾ ಭಾರತವನ್ನು ಮೂಲ ತಮಿಳಿನಲ್ಲಿ ಬರೆದವರು ಮಾಧವನ್. ಈ ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿದವರು ಅಭಿಲಾಷಾ.

ವರ್ತಮಾನದ ಸ್ತ್ರೀಯರ ಸಮಸ್ಯೆಯನ್ನು ಬಿತ್ತರಿಸುವಾಗ ಮಹಾಭಾರತದಲ್ಲಿ ಸ್ತ್ರೀಪಾತ್ರಗಳನ್ನು ಉದ್ಧರಿಸಿ, ಸ್ತ್ರೀ ಶೋಷಣೆಯನ್ನು ಕಟುವಾಗಿ ಬಿಂಬಿಸುವಲ್ಲಿ ಯಶಸ್ವಿಯ ಹಾದಿಯಲ್ಲಿರುವ ನಾಟಕವಿದು. ಎಲ್ಲಾ ಪಾತ್ರಗಳೂ ಮಹಿಳೆಯರದ್ದೇ ಆಗಿವೆ.

ಪುರಾಣಗಳು ಮತ್ತು ಮಹಾಕಾವ್ಯಗಳು, ಹಿಂದಿನ ಕಾಲದ ಕಥೆಯಾದರೂ ವರ್ತಮಾನದೊಂದಿಗೆ ಸತತವಾಗಿ ಸಂವಾದ ನಡೆಸಿ, ವರ್ತಮಾನದ ನೈಜ ಸಮಸ್ಯೆಗಳಿಗೆ ಕೈಗನ್ನಡಿಯಾದಂತಿದೆ. ಆ ಕೃತಿಗಳು ಕೇವಲ ಕಾಲದ ಮಿತಿಯೊಳಗೆ ಬಂಧಿಯಾಗದೆ, ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುತ್ತಾ, ಸಾರ್ವಕಾಲಿಕವಾದ ಸತ್ಯವನ್ನು ಬಿತ್ತರಿಸುತ್ತಿದೆ.




ಕಥೆಯನ್ನು ತನ್ನ ಮಕ್ಕಳಿಗೆ ಹೇಳುತ್ತಾ ಕತೆಗಾರ್ತಿ ಕಥೆಯ ಪಾತ್ರಗಳೊಂದಿಗೆ ಆತ್ಮೀಯಳಾಗುತ್ತಾ, ಸ್ತ್ರೀ ಸಂವೇದನೆ ಹಾಗೂ ನೋವನ್ನು ಆಧುನಿಕ ಸ್ತ್ರೀಯರೊಂದಿಗೆ ಹೋಲಿಸುತ್ತಾರೆ. ಮಹಾಭಾರತದ ಸ್ತ್ರೀ ಪಾತ್ರಗಳಾದ ಸತ್ಯವತಿ, ಅಂಬೆ, ಗಂಗೆ, ಹಿಡಿಂಬೆ, ಕುಂತಿ, ಸುಭದ್ರೆ, ಉತ್ತರೆ ಎಲ್ಲರ ನೋವಿನ ಪರದೆಯನ್ನು ತೆರೆದ ಇದು ಭಾರತದ ಇನ್ನೊಂದು ಸ್ತ್ರೀ ಸಂವೇದಿ ಮುಖವನ್ನು ಪರಿಚಯಿಸಿದಂತೆ ತೋರುತ್ತದೆ. ರೋಹಿಣಿಯ ಆತ್ಮ ಕಥೆಗಾರ್ತಿಗೆ ನೀರು ನೀಡುವುದು, ಆಕೆ ಕಥೆಗಾರಳ ಮಗಳ ಮೈಯಲ್ಲಿ ಆವಾಹನಗೊಳ್ಳುವುದು ಗತಕಾಲ ವರ್ತಮಾನದ ನೋವನ್ನು ಪ್ರತಿಬಿಂಬಿಸುವ ತಂತ್ರವಿದೆ.

ಕರ್ಣನು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳಲು ಅಸಹಾಯಕಳಾಗುವ ಕಥೆಗಾರ್ತಿಯು, ಹೇಗೆ ವರ್ತಮಾನವು ಪುರಾಣದ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಲ್ಲಿ ವಿಫಲವಾಗುವ ಸನ್ನಿವೇಶವು ಸ್ಪಷ್ಟವಾಗುತ್ತದೆ. ಈ ನಾಟಕವು ಸುಲಲಿತವಾದ ಭಾಷೆಯಿಂದಾಗಿ ಪ್ರೇಕ್ಷಕನ್ನು ತನ್ನತ್ತ ಸೆಳೆಯುವಲ್ಲಿ ಸಫಲವಾಗಿದೆ.

ರಂಗ ಸಜ್ಜಿಕೆಯನ್ನು ಹೊನ್ನಾವರದ ಕಿರಣ್ ಭಟ್, ಮುರಿದ ದಾರಂದಗಳು ಮನುಷ್ಯ ಸಂಬಂಧ ಹೇಗೆ ಮುರಿದು, ಸಂಸಾರದ ನಾಶಕ್ಕೆ ಕಾರಣವಾಗುತ್ತದೆ ಎಂಬುದನ್ನು ತೋರಿಸಿದರೆ, ಮರಕ್ಕೆ ತೂಗು ಹಾಕಿದ ತೊಟ್ಟಿಲು, ಭೂತಕಾಲದ ಬೇರುಗಳನ್ನು ಹಿಡಿದುಕೊಂಡು ವರ್ತಮಾನವನ್ನು ನೋಡುತ್ತಾ ಭವಿಷ್ಯದ ಕಡೆಗೆ ಸಾಗುತ್ತಿರುವ ಯುವ ಜನಾಂಗದ ಸಂಕೇತವಾಗಿ, ನಾಟಕದ ಮೂಲ ಆಶಯವನ್ನು ಎತ್ತಿ ತೋರಿಸುವಲ್ಲಿ ಸಹಕಾರಿಯಾಗಿದೆ.

ರಾಜು ಮಣಿಪಾಲ ಅವರು ನೀಡಿದ ಬೆಳಕಿನ ಸಂಯೋಜನೆ ಮತ್ತು ನೆರಳಿನಾಟದ, ಗತಕಾಲ ನಮ್ಮನ್ನು ಸದಾ ಕಾಡುವ ,ಹಿಂಬಾಲಿಸುವ ವಿಷಯ ಎನ್ನುವುದು ತೋರಿಸಿ, ನಾಟಕದ ಮೂಲ ಆಶಯಕ್ಕೆ ಒತ್ತು ನೀಡಿದೆ. ಒಟ್ಟು ನಾಟಕ ಪೂರ್ತಿ ಮಹಿಳೆಯ ನೋವನ್ನು ಸಂಪೂರ್ಣವಾಗಿ ಹಾಗೂ ಅರ್ಥಪೂರ್ಣವಾಗಿ ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ.

**ಪ್ರೇಮ**

## "ಪ್ರವಾಸೋದ್ಯಮದಲ್ಲಿ ಆತಿಥ್ಯ ಅಗತ್ಯ"

ಮೊದಲ ಪುಟದಿಂದ

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಎಂಬಿಎ ವಿಭಾಗದ ಅಧ್ಯಕ್ಷರಾದ ಪ್ರೊ. ಮಲ್ಲಿಕಾರ್ಜುನಪ್ಪ ಮಾತನಾಡಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಂದರೆಗಳನ್ನು ನಿವಾರಿಸಿ ಕ್ಷೇತ್ರವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಮಾಡಬೇಕು. ನಾವು ಆಹಾರ ಉತ್ಪನ್ನಗಳನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಬಳಸುತ್ತೇವೆ. ಆದರೆ ಆಹಾರ ಪೋಲಾಗುವಿಕೆಯಂತಹ ಸಣ್ಣ ವಿಷಯಗಳನ್ನು ಕಡೆಗಣಿಸುತ್ತೇವೆ. ಪ್ರಸ್ತುತ ಜಗತ್ತಿನಲ್ಲಿ ಉತ್ಪಾದನೆಯಾಗುವ ಆಹಾರದಲ್ಲಿ ಶೇಕಡಾ 28ರಷ್ಟು ಆಹಾರ ಪೋಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಸಂಯೋಜಕರಾದ ಎಂಬಿಎ ವಿಭಾಗದ ಪ್ರೊ. ಮುಸ್ರಿರ ಬೇಗಂ ಸ್ವಾಗತಿಸಿದರು. ಅದ್ಯಾಪಕ ಸಲಹೆಗಾರ ಸಹಾಯಕ ಪ್ರೊ. ಜೋಸೆಫ್ ಪಿ.ಡಿ ವಂದಿಸಿದರು.

ಪ್ರಕಾಶಕರು ಹಾಗು ಸಂಪಾದಕರು: ಪ್ರೊ. ಜಿ.ಪಿ ಶಿವರಾಂ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199
ಕಾರ್ಯಕಾರಿ ಸಂಪಾದಕರು: ಪ್ರೊ. ವಹೀದಾ ಸುಲ್ತಾನಾ, ಮುದ್ರಕರು: ನೆಡ್ ಪ್ರಿಂಟ್ಸ್, ಯೆಯ್ಯಾಡಿ ಮಂಗಳೂರು.